1) ಜಂಟಿ ನಿರ್ದೇಶಕರು(ತರಬೇತಿ) ಬೆಂಗಳೂರು.

2) ಜಂಟಿ ನಿರ್ದೇಶಕರು(ಆಡಳಿತ), ಬೆಂಗಳೂರು.

3) ಜಂಟಿ ನಿರ್ದೇಶಕರು (ಯುವಜನ ಸೇವೆ ಮತ್ತು ಕ್ರೀಡೆ) ಬೆಂಗಳೂರು ವಿಭಾಗ.

4) ಜಂಟಿ ನಿರ್ದೇಶಕರು (ಯುವಜನ ಸೇವೆ ಮತ್ತು ಕ್ರೀಡೆ) ಮೈಸೂರು ವಿಭಾಗ.

5) ಜಂಟಿ ನಿರ್ದೇಶಕರು (ಯುವಜನ ಸೇವೆ ಮತ್ತು ಕ್ರೀಡೆ) ಬೆಳಗಾಂ ವಿಭಾಗ.

ಆ) ಯಾವುದೂ ಇಲ್ಲ.

ಬೆಂಗಳೂರಿನ ಅಕ್ಕತಿಮ್ಮನ ಹಳ್ಳಿಯಲ್ಲಿ ಹಾಕಿ ಕ್ರೀಡಾಂಗಣ ನಿರ್ಮಾಣ.

1231 (1481) ಶ್ರೀ ಅಪ್ಪಚ್ಚು ರಂಜನ್. ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಅಕ್ಕಿತಿಮ್ಮನಹಳ್ಳಿಯಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರದಿಂದ ಹಣ ಬಿಡುಗಡೆ ಮಾಡಲಾಗಿದೆಯೇ? ಹಾಗಿದ್ದಲ್ಲಿ ಬಿಡುಗಡೆಯಾದ ಹಣ ಎಷ್ಟು ಮತ್ತು ಯಾವ ಯಾವ ಷರತ್ತುಗಳ ಅನ್ವಯ ಬಿಡುಗಡೆ ಮಾಡಲಾಗಿದೆ?

ಆ) ಈ ಹಾಕಿ ಕ್ರೀಡಾಂಗಣದ ನಿವೇಶನ ಹಾಗೂ ಕ್ರೀಡಾಂಗಣ ಒಡೆತನ ಯಾರಿಗೆ ಸೇರಿದೆ?

ಇ) ಅಕ್ಕಿತಿಮ್ಮನಹಳ್ಳಿಯಲ್ಲಿರುವ ಹಾಕಿ ಕ್ರೀಡಾಂಗಣಕ್ಕೆ ದಿವಂಗತ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪನವರ ಹೆಸರನ್ನು ನಾಮಕರಣ ಮಾಡಲಾಗುವುದೆಂದು ದಿನಾಂಕ 12-6-99ರಂದು ಅಂದಿನ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದ್ದರೂ ಸಹ ಇದುವರೆವಿಗೂ ಕಾರ್ಯಗತವಾಗದೇ ಇರಲು ಕಾರಣಗಳೇನು? ಯಾವಾಗ ನಾಮಕರಣ ಮಾಡಲಾಗುವುದು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು. ಸರ್ಕಾರದಿಂದ ರಾಜ್ಯ ಹಾಕಿ ಸಂಸ್ಥೆಗೆ ರೂ.೫೧.೦೦ ಲಕ್ಷಗಳನ್ನು ಬಿಡುಗಡೆ ಮಾಡುತ್ತಾ ಸರ್ಕಾರವು ರಾಜ್ಯ ಹಾಕಿ ಸಂಸ್ಥೆಗೆ ಈ ಕೆಳಕಂಡ ಸರ್ಕಾರಿ ಅಧಿಕಾರಿಗಳ ಪ್ರತಿನಿಧಿಸುವ ಷರತ್ತು ವಿಧಿಸಿದೆ.

1) ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿ ಶಿಕ್ಷಣ ಮತ್ತು ಯುವಜನ ಸೇವೆ ಇಲಾಖೆ.

2) ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿ ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ.

3) ಸರ್ಕಾರದ ಆಯುಕ್ತರು ಹಾಗೂ ಕಾರ್ಯದರ್ಶಿ ಆರ್ಥಿಕ ಇಲಾಖೆ.

4) ನಿರ್ದೇಶಕರು, ಯುವಜನ ಸೇವೆ ಮತ್ತು ಸರ್ಕಾರದ ಪದ ನಿಮಿತ್ತ ಜಂಟಿ ಕಾರ್ಯದರ್ಶಿ, ಶಿಕ್ಷಣ ಮತ್ತು ಯುವಜನ ಸೇವೆ.

ಆ) ಬೆಂಗಳೂರು ಮಹಾನಗರ ಪಾಲಿಕೆಯು ಅಕ್ಕಿತಿಮ್ಮನಹಳ್ಳಿ ಖಾಲಿ ನಿವೇಶನವನ್ನು ರಾಜ್ಯ ಹಾಕಿ ಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ನೀಡಿದೆ. ಆದರೆ ಈ ಕ್ರೀಡಾಂಗಣವು ಇಲಾಖೆಯ ಒಡೆತನದಲ್ಲಿದೆ.

ಇ) ಯಾವುದೇ ತೀರ್ಮಾನ ಕೈಗೊಂಡಿರುವುದಿಲ್ಲ. ಕ್ರೀಡಾಂಗಣಕ್ಕೆ ಹೆಸರನ್ನು ಇಡುವ ಬಗ್ಗೆ ಮುಂದೆ ಪರಿಶೀಲಿಸಲಾಗುವುದು.